# <u>ಪತ್ರಿಕಾ ಪ್ರಕಟಣೆ</u>

## ರೆಸ್ಟೋರೆಂಟ್ ಅಸೋಸಿಯೇಷನ್‌ನೊಂದಿಗೆ ಜಾರಿ ವಿಭಾಗ, ದಕ್ಷಿಣ ವಲಯದ ಸಂವಾದ – ಪಾರದರ್ಶಕ ಹಾಗೂ ತಂತ್ರಜ್ಞಾನಾಧಾರಿತ ಜಾರಿ ಕ್ರಮಗಳಿಗೆ ಒತ್ತು

ವಾಣಿಜ್ಯ ತೆರಿಗೆ ಇಲಾಖೆಯ ಜಾರಿ, ದಕ್ಷಿಣ ವಲಯ, ಬೆಂಗಳೂರು ವತಿಯಿಂದ ರೆಸ್ಟೋರೆಂಟ್ ಅಸೋಸಿಯೇಷನ್ ಪ್ರತಿನಿಧಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂವಾದದ ಅಧ್ಯಕ್ಷತೆಯನ್ನು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ರವರು ವಹಿಸಿದ್ದರು ಹಾಗೂ ಜಾರಿ, ದಕ್ಷಿಣ ವಲಯ ವಿಭಾಗದ ಎಲ್ಲಾ ಉಪ ಆಯುಕ್ತರುಗಳು ಹಾಗೂ ಇತರೆ ಜಾರಿ ಅಧಿಕಾರಿಗಳು ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇಲಾಖೆಯ ಪ್ರಕರಣಗಳ ತೀವ್ರತೆಯ ಸೂಚ್ಯಂಕ ಆಧಾರಿತ (Risk-based) ಹಾಗೂ ತಂತ್ರಜ್ಞಾನ ಚಾಲಿತ (Technology Driven) ಜಾರಿ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದೊಂದಿಗೆ ಆಯೋಜಿಸಲಾದ ಸದರಿ ಸಂವಾದದಲ್ಲಿ ರೆಸ್ಟೋರೆಂಟ್ ವಲಯಕ್ಕೆ ಸಂಬಂಧಿಸಿದ ಜಿಎಸ್‌ಟಿ ಅನುಸರಣಾ (GST Compliance) ವಿಷಯಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಜಾರಿ ವಿಭಾಗದ ವ್ಯಾಪ್ತಿಯಲ್ಲಿ ತಪಾಸಣೆಗೆ ಪ್ರಕರಣಗಳನ್ನು ಯಾವುದೇ ರೀತಿಯ ಯಾದೃಚ್ಛಿಕ ಅಥವಾ ವೈಯಕ್ತಿಕ ನಿರ್ಧಾರದ ಆಧಾರದ ಮೇಲೆ ಆಯ್ಕೆ ಮಾಡುವುದಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿತು. ತೆರಿಗೆದಾರರ ವಹಿವಾಟು ಹಾಗೂ ಅನುಸರಣಾ ಸ್ವರೂಪಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ವಿಶ್ಲೇಷಿಸಿ, ಪ್ರಕರಣಗಳ ತೀವ್ರತೆಯ ಸೂಚ್ಯಂಕ ಆಧಾರಿತ (Risk-based) ದತ್ತಾಂಶಗಳ ಆಧಾರದ ಮೇಲೆ ಹೆಚ್ಚಿನ, ಮಧ್ಯಮ ಮತ್ತು ಕಡಿಮೆ ತೀವ್ರತೆಯ ವರ್ಗಗಳಾಗಿ ವಿಂಗಡಿಸಿ ಪ್ರಕರಣಗಳನ್ನು ಗುರುತಿಸಲಾಗುತ್ತದೆ. ಹೀಗೆ ಗುರುತಿಸಲಾದ ಪ್ರಕರಣಗಳಲ್ಲಿ ತೆರಿಗೆ ವಂಚನೆಯನ್ನು ದೃಢೀಕರಿಸಲು ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ವರ್ತಕರು ಸೂಕ್ತ ದಾಖಲೆಗಳ ಮೂಲಕ ವಿವರಣೆ ನೀಡಲು ಅವಕಾಶವನ್ನು ಒದಗಿಸಲಾಗುತ್ತದೆ ಎಂದು ತಿಳಿಸಲಾಯಿತು.

ಮೇಲ್ಕಂಡ ತಪಾಸಣೆ ಆಯ್ಕೆಯ ಪ್ರಕ್ರಿಯೆಯ ನಂತರ ಜಾರಿ ವಿಭಾಗದ ಅಧಿಕಾರಿಗಳಿಗೆ ತಪಾಸಣೆಗಾಗಿ ಕಾರ್ಯಸೂಚಿಗಳನ್ನು ನೀಡುವ ಸಂದರ್ಭದಲ್ಲಿ ಅಧಿಕಾರಿಗಳ ವೈಯಕ್ತಿಕ ಪೂರ್ವಾಗ್ರಹಕ್ಕೆ ಅವಕಾಶ ನೀಡದಂತೆ ನ್ಯಾಯಸಮ್ಮತತೆ ಹಾಗೂ ವಸ್ತುನಿಷ್ಠತೆಯನ್ನು ಖಚಿತಪಡಿಸಿಕೊಂಡು, ನಿರ್ದಿಷ್ಟ ವ್ಯವಸ್ಥೆಯ ಮೂಲಕ ಪ್ರಕರಣಗಳನ್ನು ತಪಾಸಣೆಗಾಗಿ ಜಾರಿ ಅಧಿಕಾರಿಗಳಿಗೆ ಯಾದೃಚ್ಛಿಕವಾಗಿ ಹಂಚಿಕೆ ಮಾಡಲಾಗುತ್ತದೆ. ಇದರಿಂದ ಜಾರಿ ವಿಭಾಗದ ಯಾವುದೇ ಅಧಿಕಾರಿ ಸ್ವತಃ ನಿರ್ದಿಷ್ಟ ತೆರಿಗೆದಾರರನ್ನು ತಪಾಸಣೆಗೆ ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಂವಾದದ ಮುಂದುವರಿದ ಭಾಗವಾಗಿ, ಇಲಾಖೆಯು ಅಳವಡಿಸಿಕೊಂಡಿರುವ ವಿವಿಧ ಇ–ಉಪಕ್ರಮಗಳ ಕುರಿತು ಜಾರಿ ಅಧಿಕಾರಿಗಳು ವಿವರಿಸಿದರು. ತಪಾಸಣೆಯ ಅಧಿಕೃತ ಕಾರ್ಯಸೂಚಿಗಳು (Assignments),

ತಿಳಿವಳಿಕೆಗಳು, ಕಾರಣ ಕೇಳುವ ನೋಟಿಸ್‌ಗಳು (SCN), ಹಿಂಬರಹಗಳು (Endorsement), ವರದಿಗಳು (Reports) ಹಾಗೂ ಆದೇಶಗಳನ್ನು GST Back Office/Common Portal ಮೂಲಕ ಹೊರಡಿಸಲಾಗುತ್ತಿದ್ದು, ಸಂಬಂಧಿಸಿದ ದಾಖಲೆಗಳು ತೆರಿಗೆದಾರರ GST Common Portal ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ ಹಾಗೂ ಅವಶ್ಯಕ ಸಂದರ್ಭಗಳಲ್ಲಿ ಅವುಗಳನ್ನು ನೋಂದಾಯಿತ ತೆರಿಗೆದಾರರ (RTP) ನೋಂದಾಯಿತ ಇ-ಮೇಲ್ ವಿಳಾಸಕ್ಕೂ ಕಳುಹಿಸಲಾಗುತ್ತದೆ.

GST ಜಾಲತಾಣ ಅಥವಾ ಮಾನ್ಯವಾದ ಸಿಸ್ಟಮ್-ಜನರೇಟೆಡ್ ಉಲ್ಲೇಖ ಸಂಖ್ಯೆ (Reference Number) ಇಲ್ಲದ ಯಾವುದೇ ಇಲಾಖಾ ನೋಟಿಸ್ ಅಥವಾ ಸಂವಹನವನ್ನು ಪರಿಶೀಲನೆ ಮಾಡದೆ ಸ್ವೀಕರಿಸಬಾರದು ಅಥವಾ ಅದರ ಆಧಾರದ ಮೇಲೆ ಅನುಸರಣೆ ಕೈಗೊಳ್ಳಬಾರದು ಎಂದು ಅಸೋಸಿಯೇಷನ್ ಸದಸ್ಯರಿಗೆ ತಿಳಿಸಲಾಯಿತು ಮತ್ತು ಇಂತಹ ಪ್ರಕರಣಗಳು ಕಂಡುಬಂದಲ್ಲಿ ಅವುಗಳನ್ನು ಇಲಾಖೆಯ ಗಮನಕ್ಕೆ ತರಲು ಸೂಚಿಸಲಾಯಿತು.

ತೆರಿಗೆದಾರರಿಗೆ ಅನಗತ್ಯ ತೊಂದರೆ ಉಂಟಾಗದಂತೆ, ನ್ಯಾಯಸಮ್ಮತ, ಪಾರದರ್ಶಕ ಮತ್ತು ವಿವೇಚನಾಯುತ ಜಾರಿ ಕ್ರಮಗಳನ್ನು ಅನುಸರಿಸುವುದೇ ಇಲಾಖೆಯ ಉದ್ದೇಶ ಎಂದು ಪುನರುಚ್ಚರಿಸಲಾಯಿತು. ಸಂಘವು ತನ್ನ ಸದಸ್ಯರಿಗೆ ಸರಿಯಾದ ತೆರಿಗೆ ಬಿಲ್ (Tax Invoice) ನೀಡಿಕೆ, ವಹಿವಾಟಿನ ನಿಖರ ಘೋಷಣೆ, GST Returnsಗಳೊಂದಿಗೆ ಬಿಲ್ಲಿಂಗ್ ದಾಖಲೆಗಳ ಹೊಂದಾಣಿಕೆ, Returnsಗಳ ಸಕಾಲಿಕ ಸಲ್ಲಿಕೆ ಹಾಗೂ ಸಮರ್ಪಕ ದಾಖಲೆಗಳ ನಿರ್ವಹಣೆಯ ಕುರಿತು ಅರಿವು ಮೂಡಿಸುವಂತೆ ಇಲಾಖೆಯ ವತಿಯಿಂದ ಪ್ರೋತ್ಸಾಹಿಸಲಾಯಿತು. ಈ ಸಂವಾದವು ರೆಸ್ಟೋರೆಂಟ್ ವಲಯದ ಪ್ರತಿನಿಧಿಗಳಿಗೆ ಜಿಎಸ್‌ಟಿ ಅನುಸರಣಾ (GST Compliance) ಪ್ರಕ್ರಿಯೆಗಳಲ್ಲಿನ ಪ್ರಾಯೋಗಿಕ ಸಮಸ್ಯೆಗಳನ್ನು ಗುರುತಿಸಲು ಹಾಗೂ ಪರಿಹಾರಾತ್ಮಕ ಕ್ರಮಗಳನ್ನು ಅನುಸರಿಸುವ ನಿಟ್ಟಿನಲ್ಲಿ ಸ್ಪಷ್ಟತೆಯನ್ನು ಗ್ರಹಿಸಲು ಅವಕಾಶವನ್ನು ಒದಗಿಸಿತು.

ರೆಸ್ಟೋರೆಂಟ್ ಅಸೋಸಿಯೇಷನ್‌ನ ಸದಸ್ಯರು ಈ ಉಪಕ್ರಮವನ್ನು ಶ್ಲಾಘಿಸಿದರು ಮತ್ತು GST ಕಾಯ್ದೆಯ ಅಡಿಯಲ್ಲಿ ಅಳವಡಿಸುವ ಪ್ರಮುಖ ತಿದ್ದುಪಡಿಗಳು, ಕಾರ್ಯವಿಧಾನದ ಬದಲಾವಣೆಗಳು ಅಥವಾ ಹೊಸ ಅನುಸರಣಾ ಅವಶ್ಯಕತೆಗಳನ್ನು ಪರಿಚಯಿಸಿದ ಸಂದರ್ಭದಲ್ಲಿ ನಿಯಮಿತವಾಗಿ ಇಂತಹ ಮಾಹಿತಿದಾಯಕ ಮತ್ತು ಸಂವಾದಾತ್ಮಕ ಸಭೆಗಳನ್ನು ಆಗಾಗ್ಗೆ ನಡೆಸುವಂತೆ ಇಲಾಖೆಯನ್ನು ವಿನಂತಿಸಿದರು ಮತ್ತು ಕಾನೂನಿನ ಬದಲಾವಣೆಗಳನ್ನು ಸಕಾಲಿಕವಾಗಿ ಅರ್ಥಮಾಡಿಕೊಳ್ಳಲು, ಪರಿಣಾಮಕಾರಿ ಅನುಸರಣೆಯನ್ನು ಖಚಿತಪಡಿಸಿಕೊಂಡು ಅಳವಡಿಸಿಕೊಳ್ಳಲು, ಜಿಎಸ್‌ಟಿ ಅನುಸರಣೆ (GST Compliance)ಯಲ್ಲಿ ಉದ್ದೇಶಪೂರ್ವಕವಲ್ಲದ ತಮ್ಮ ದೋಷಗಳನ್ನು ತಿದ್ದಿಕೊಂಡು ಕಡಿಮೆ ಮಾಡಲು ಮತ್ತು ಅನಾವಶ್ಯಕ ವಿವಾದಗಳನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಇಂತಹ ಸೂಕ್ತ ಮಾರ್ಗದರ್ಶನಾಧಾರಿತ ಸಂವಾದವು ಸಹಕರಿಸುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಪ್ರಕರಣಗಳ ತೀವ್ರತೆಯ ಸೂಚ್ಯಂಕ ಆಧಾರಿತ (Risk-based) ಪ್ರಕರಣಗಳ ಆಯ್ಕೆ ಹಾಗೂ ವಿಭಾಗದ ಅಧಿಕಾರಿಗಳಿಗೆ ತಪಾಸಣೆಗಳ ವ್ಯವಸ್ಥಿತ ಹಂಚಿಕೆ, ಡಿಜಿಟಲ್ ಸಂವಹನ ಮತ್ತು ಪಾರದರ್ಶಕ ಪ್ರಕ್ರಿಯೆಗಳನ್ನು ಇನ್ನಷ್ಟು ಬಲಪಡಿಸುವುದರ ಜೊತೆಗೆ, ವ್ಯಾಪಾರ ಸಮುದಾಯದೊಂದಿಗೆ ರಚನಾತ್ಮಕ ಸಂವಾದವನ್ನು ಮುಂದುವರಿಸುವುದಾಗಿ ಜಾರಿ ವಿಭಾಗ ಭರವಸೆ ನೀಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು
(ಜಾರಿ), ದಕ್ಷಿಣ ವಲಯ, ಬೆಂಗಳೂರು